ಕೋರಿಕೆ ಇಟ್ಟಿದ್ದೇ ತಡ ಅದು ನನ್ನ ಕೈಯಿಂದ ಹಾವಿನ ಥರ ನುಣುಚಿಕೊಂಡು ಹೊರಗೆ ನೆಗೆಯಿತು.'

'ಅದೆಲ್ಲಾ ಇರಲಿ, ಈಗ ಇನ್ನೂರು ಪೌಂಡುಗಳೆಲ್ಲಿ? ನನಗೆ ಕಾಣಿಸುತ್ತಿಲ್ಲವಲ್ಲ? ಕಾಣಿಸುವುದೂ ಇಲ್ಲವೇನೊ?' ಕೆಳಗೆ ಬಿದ್ದಿದ್ದ ಕೋತಿಯ ಪಂಜವನ್ನು ಎತ್ತಿ ಮೇಲಿಡುತ್ತಾ ವ್ಯಂಗ್ಯದಿಂದ ಕೇಳಿದ ಹರ್ಬರ್ಟ್.

'ಸಾರ್ಜೆಂಟ್ ಮೇಜರ್ ಸಾಹೇಬರು ನಿಮ್ಮ ತಲೆಯ ಮೇಲೆ ಚೆನ್ನಾಗಿ ಟೋಪಿ ಇಟ್ಟರೆಂದು ಕಾಣಿಸುತ್ತದೆ!' ಹೇಳುತ್ತಾ ಮಿಸೆಸ್ ವೈಟ್ ಕಿಸಕ್ಕನೇ ನಕ್ಕಳು.

'ಸಾಯಿಲಿ ಬಿಡೆ. ಏನೇ ಅನ್ನು, ಇಂತಾದೊಂದು ಅನುಭವ ನನಗೆ ಈ ಮೊದಲೆಂದೂ ಆಗಿರಲಿಲ್ಲ.'

ಅವರು ಅಗ್ಗಿಷ್ಟಿಕೆಯ ಮುಂದೆ ಕುಳಿತರು. ಹೊರಗೆ ಗಾಳಿ ನರಿಯ ಹಾಗೆ ಹುಯಿಲಿಡುತಿತ್ತು. ಗಾಳಿಯ ರಭಸಕ್ಕೆ ಮಹಡಿಯ ಮೇಲಿನ ಬಾಗಿಲೊಂದು 'ಧಡಾರ್' ಶಬ್ದದಿಂದ ಮುಚ್ಚಿಕೊಂಡಾಗ ಯಾವುದೋ ಗುಂಗಿನಲ್ಲಿದ್ದ ಮಿಸ್ಟರ್ ವೈಟ್ ಒಮ್ಮೆಲೆ ಕಂಪಿಸಿದ. ಅವರ ಮಧ್ಯೆ ಗಾಢವಾದ ಮೌನ ಕವಿಯಿತು. ಕೊನೆಗೆ ಗಂಡ ಹೆಂಡತಿ ಇಬ್ಬರೂ ಮಲಗುತ್ತೇವೆಂದು ಹೇಳಿ ಎದ್ದರು.

'ಡ್ಯಾಡಿ, ನೀನು ಕೇಳಿಕೊಂಡಿದ್ದ ಇನ್ನೂರು ಪೌಂಡುಗಳು ಖಂಡಿತವಾಗಿಯೂ ನಿಮ್ಮ ಹಾಸಿಗೆಯ ಮೇಲೆ ಇರುತ್ತವೆ ನೋಡಿ!' ಎಂದು ವಿಷಾದದ ನಗೆ ನಕ್ಕ ಹರ್ಬರ್ಟ್. 'ಆದರೆ ಜಾಗ್ರತೆ. ಬೀರುವಿನ ಮೇಲಿನಿಂದ ಒಂದು ಜೊತೆ ಕಣ್ಣುಗಳು ಪಿಳಿ ಪಿಳಿ ಎಂದು ನಿಮ್ಮನ್ನೇ ಗಮನಿಸುತ್ತಿರುತ್ತವೆ!'

ವೈಟ್ ದಂಪತಿ ಎದ್ದು ಹೋದರು. ನಂದಿ ಹೋಗುತ್ತಿದ್ದ ಅಗ್ಗಿಷ್ಟಿಕೆಯ ಬಳಿ ಒಬ್ಬನೇ ಕುಳಿತುಕೊಂಡು ಹರ್ಬರ್ಟ್ ಬೆಂಕಿಯನ್ನೇ ಗಮನಿಸುತ್ತಿದ್ದ. ಅವನು ನೋಡುತ್ತಿದ್ದಂತೆ ಒಂದು ಕೋತಿಯ ಮುಖ ಬೆಂಕಿಯಲ್ಲಿ ಮೂಡತೊಡಗಿತು. ಅದು ಎಷ್ಟೊಂದು ಸ್ಪಷ್ಟವಾಗಿ ಎದ್ದು ಕಾಣತೊಡಗಿತೆಂದರೆ, ಹರ್ಬರ್ಟ್, ಮೇಜಿನ ಮೇಲಿದ್ದ ನೀರಿನ ಲೋಟವನ್ನೆತ್ತಿ ಅದರ ಮೇಲೆ ಎಸೆದು ಎದ್ದು ನಿಂತ. ಕೋತಿಯ ಪಂಜವನ್ನೆತ್ತಿ ಪಕ್ಕದ ಸ್ಟ್ಯಾಂಡಿನ ಮೇಲಿಟ್ಟು ಮಲಗಲು ಮಹಡಿಯ ಮೆಟ್ಟಿಲುಗಳನ್ನು ಹತ್ತತೊಡಗಿದ.

★★★

ಚಳಿಗಾಲದ ಮರುದಿನ ಮುಂಜಾನೆ ಸೂರ್ಯನ ಎಳೆಬಿಸಿಲು ಡೈನಿಂಗ್ ಟೇಬಲಿನ ಮೇಲೆ ಹರಡಿತ್ತು. ಹಿಂದಿನ ರಾತ್ರಿಯನ್ನು ನೆನೆದು ಹರ್ಬರ್ಟನಿಗೆ ನಗು ಬಂತು. ಪಕ್ಕದ ಸ್ಟ್ಯಾಂಡಿನ ಮೇಲೆ ಗಲೀಜಾಗಿದ್ದ ಕೋತಿಯ ಪಂಜ ಅನಾಥವಾಗಿ ಬಿದ್ದುಕೊಂಡಿತ್ತು. ಅದರ ಮೇಲಿನ ಕುತೂಹಲ, ಆಸಕ್ತಿ ಅವನಿಗೆ ಈಗಾಗಲೇ ತಣ್ಣಗಾಗಿ ಹೋಗಿತ್ತು.

'ಈ ವಯಸ್ಸಾದ ಸೈನಿಕರೆಲ್ಲಾ ಹೀಗೆಯೇ...' ಮಿಸೆಸ್ ವೈಟ್ ಹೇಳಿದಳು. 'ಅವನ ಪುರಾಣ ಕೇಳಿದ ನಾವೂ ಮಂಗಗಳಾದೆವು. ಈಗಲೂ ಇಂತ ಮೂಢನಂಬಿಕೆಗಳನ್ನೆಲ್ಲಾ ನಂಬುತ್ತಾರಲ್ಲ? ನಿಜಕ್ಕೂ ಆಶ್ಚರ್ಯವಾಗುತ್ತದೆ.'

'ಏನೇ ಆಗಲಿ ಡ್ಯಾಡ್, ನಾನು ವಾಪಸ್ಸು ಬರುವುದರೊಳಗೆ ಇನ್ನೂರು ಪೌಂಡ್ ದೊರೆತರೆ ಮುಚ್ಚಿಡಬೇಡ!' ಎನ್ನುತ್ತಾ ನಕ್ಕು ಹರ್ಬರ್ಟ್ ಎದ್ದು ನಿಂತ.

ಮಿಸೆಸ್ ವೈಟ್ ಹೊಟ್ಟೆ ತುಂಬಾ ನಕ್ಕಳು. ಅವಳು ಎದ್ದು ಮಗನ ಜೊತೆಯಲ್ಲಿ ಮುಂಬಾಗಿಲವರೆಗೆ ಹೋಗಿ ಅವನನ್ನು ಬೀಳ್ಕೊಟ್ಟಳು. ಹರ್ಬರ್ಟ್ ಬಾಗಿಲು ತೆರೆದು ಮೆಟ್ಟಿಲಿಳಿದು... ಅವನು ಕಣ್ಮರೆಯಾಗುವವರೆಗೆ ಮಿಸೆಸ್ ವೈಟ್ ಅವನನ್ನೇ ನೋಡುತ್ತಾ ನಿಂತಳು.